# ಬಂಗಾರ ಗೆಲ್ಲಲು ಇಷ್ಟಪಡುವೆ ಎಂದ ಸುಹಾಸ್

**ಪ್ಯಾರಿಸ್:** ಪ್ಯಾರಾಲಿಂಪಿಕ್ಸ್‌ನ ಪ್ಯಾರಾ ಬ್ಯಾಡ್ಮಿಂಟನ್ ವಿಭಾಗದಲ್ಲಿ ಸತತ 2ನೇ ಪದಕ ಗೆದ್ದ ಮೊದಲ ಭಾರತೀಯ ಎನಿಸಿರುವ ಕನ್ನಡಿಗ ಸುಹಾಸ್ ಯತಿರಾಜ್, ಪ್ಯಾರಿಸ್‌ನಲ್ಲಿ ಮತ್ತೆ ಬೆಳ್ಳಿ ಪದಕ ಜಯಿಸಿರುವುದಕ್ಕೆ ಹೆಮ್ಮೆ ಇದ್ದರೂ, ಚಿನ್ನ ಕೈ ತಪ್ಪಿರುವುದಕ್ಕೆ ಹತಾಶೆ ಇದೆ ಎಂದಿದ್ದಾರೆ. ವಿಶ್ವ ನಂ.1 ಆಗಿ ಗೇಮ್ಸ್‌ನಲ್ಲಿ ಕಣಕ್ಕಿಳಿದ 41 ವರ್ಷದ ಸುಹಾಸ್, ಅಗ್ರ ಶ್ರೇಯಾಂಕಿತ ಹಾಗೂ ವಿಶ್ವ ಚಾಂಪಿಯನ್ ಆಗಿ ಪ್ಯಾರಿಸ್‌ಗೆ ಬಂದಾಗ ನನ್ನ ಮೇಲೆ ಒತ್ತಡ ಮತ್ತು ಹೆಚ್ಚಿನ ನಿರೀಕ್ಷೆಗಳಿದ್ದವು. ಜತೆಗೆ ಉತ್ತಮ ಪ್ರದರ್ಶನ ನೀಡುವ ನಿರೀಕ್ಷೆ ಇತ್ತು. ಆದರೆ ನಾನು ಚಿನ್ನದ ಪದಕವನ್ನು ಗೆಲ್ಲಲು ಇಷ್ಟಪಡುತ್ತೇನೆ. ಅದು ಪ್ರತಿಯೊಬ್ಬ ಆಟಗಾರನ ಕನಸಾಗಿದೆ ಎಂದಿದ್ದಾರೆ. ಬೆಳ್ಳಿಯನ್ನು ಗೆಲ್ಲುವುದು ಮಿಶ್ರ ಭಾವನೆಯಾಗಿದೆ. ಚಿನ್ನದ ಪದಕ ಕಳೆದುಕೊಂಡ ದುಃಖ ಮತ್ತು ನಿರಾಸೆ ಇದೆ. ಆದರೆ ಪ್ಯಾರಾಲಿಂಪಿಕ್ಸ್‌ನಲ್ಲಿ ದೇಶವನ್ನು ಪ್ರತಿನಿಧಿಸುವುದು ದೊಡ್ಡ ವಿಷಯ. ಬೆಳ್ಳಿ ಗೆದ್ದಿರುವುದು ಹೆಮ್ಮೆಯ ಕ್ಷಣವಾಗಿದೆ ಮತ್ತು ಕೃತಜ್ಞತೆ ಸಲ್ಲಿಸುತ್ತೇನೆ ಎಂದು 2007ರ ಕೇಡರ್‌ನ ಐಎಎಸ್ ಅಧಿಕಾರಿ ಸುಹಾಸ್ ಸಂತೋಷ ವ್ಯಕ್ತಪಡಿಸಿದರು. ಐಎಎಸ್ ಅಧಿಕಾರಿ ಜತೆಗೆ ಇಂಜಿನಿಯರಿಂಗ್ ಪದವೀಧರರಾಗಿರುವ ಸುಹಾಸ್, ಹುಟ್ಟುವಾಗಲೇ ಬಲಗಾಲಿನ ಅಂಗವೈಕಲ್ಯ ಹೊಂದಿದ್ದರು.

Vijayavani, Date: 04/09/24, p,no- 10